# ಡಾ. ಬಿ. ಆರ್. ಅಂಬೇಡ್ಕರ್: ಮಾನವತಾವಾದಿ

**ನಾಗರಾಜ ಚಲುವಾದಿ ಇಟಗಿ**

ಸಂಶೋಧನಾ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು, ಕ.ವಿ.ವಿ., ಧಾರವಾಡ.

DOI: https://doi.org/10.5281/zenodo.17805929

## ABSTRACT:

ಭಾರತದ ಸಂವಿಧಾನ ಶಿಲ್ಪಿ, ಡಾ. ಬಿ. ಆರ್. ಅಂಬೇಡ್ಕರ್ ಅವರ ಮಾನವತಾವಾದಿ ಜೀವನ ಮತ್ತು ಕೊಡುಗೆಯನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಏಪ್ರಿಲ್ 14, 1891 ರಂದು ಜನಿಸಿದ ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ಅಸ್ಪೃಶ್ಯತೆ, ಶೋಷಣೆ ಮತ್ತು ಅನ್ಯಾಯದ ವಿರುದ್ಧ ಹೋರಾಡಿದರು. ಕಬೀರದಾಸರ ತತ್ವಶಾಸ್ತ್ರದಿಂದ ಪ್ರಭಾವಿತರಾಗಿ, ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದಂತಹ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದರು. ವಿದೇಶಗಳಲ್ಲಿ ಉನ್ನತ ಪದವಿಗಳನ್ನು ಪಡೆದ ಅವರು, ದಮನಿತ ಜನಾಂಗಕ್ಕೆ ಗೌರವ ತರಲು ಶ್ರಮಿಸಿದರು. ಸುಮಾರು 61 ದೇಶಗಳನ್ನು ಸುತ್ತಾಡಿ, 2 ವರ್ಷ 11 ತಿಂಗಳು 18 ದಿನಗಳಲ್ಲಿ ಭಾರತಕ್ಕೆ ಬೃಹತ್ ಸಂವಿಧಾನವನ್ನು ರಚಿಸಿದರು. ಹಿಂದೂ ಧರ್ಮದ ಶೋಷಣೆಯಿಂದ ಬೇಸತ್ತು, ಅಕ್ಟೋಬರ್ 14, 1956 ರಂದು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಅವರ ಹೋರಾಟವು ದಲಿತರ ವಿಮೋಚನೆ ಮತ್ತು ಸಾಮಾಜಿಕ ನ್ಯಾಯಕ್ಕೆ ಮೀಸಲಾಗಿತ್ತು.

## KEYWORDS:

ಮಾನವತಾವಾದಿ, ಡಾ. ಬಿ. ಆರ್. ಅಂಬೇಡ್ಕರ್, ಸಂವಿಧಾನ ಶಿಲ್ಪಿ, ಸಾಮಾಜಿಕ ನ್ಯಾಯ, ಬೌದ್ಧ ಧರ್ಮ.

ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಕಲಿಸುವ ಧರ್ಮವನ್ನು ನಾನು ಇಷ್ಟಪಡುತ್ತೇನೆ. ಜೀವನವು ದೀರ್ಘವಾಗಿರುವುದಕ್ಕಿಂತ ಉತ್ತಮವಾಗಿರಬೇಕು. ರಾಜಕೀಯ ಎಂಬ ದೇಹಕ್ಕೆ ಕಾನೂನು ಮತ್ತು ಸುವ್ಯವಸ್ಥೆಗಳೇ ಔಷಧಗಳಾಗಿವೆ. ರಾಜಕೀಯಕ್ಕೆ ಕಾಯಿಲೆ ಬಂದಾಗ ಈ ಔಷಧಗಳನ್ನು ಕೊಡಲೇ ಬೇಕಾಗುತ್ತದೆ ಎಂದು ಹೇಳಿದ ಸಂವಿಧಾನ ಶಿಲ್ಪಿ, ಭಾರತರತ್ನ, ದಲಿತರ ಸೂರ್ಯ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ 1891 ಏಪ್ರಿಲ್ 14 ರಂದು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಅಂಬಾವಾಡೆಯಲ್ಲಿ ಜನಿಸಿದರು. ಇವರು ಬದುಕಿನುದ್ದಕ್ಕೂ ಮಾಡಿರುವ ಭಾಷಣಗಳು ಮತ್ತು ಬರಹಗಳು ಈ ರಾಷ್ಟ್ರದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಬೇಕೆಂಬ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಅವರ ಭಾಷಣ ಮತ್ತು ಬರಹಗಳನ್ನು ಹಲವಾರು ಸಂಪುಟಗಳಲ್ಲಿ ಪ್ರಕಟಿಸಿ ಓದುಗರಿಗೆ ಅವಕಾಶ ಮಾಡಿಕೊಟ್ಟಿದೆ. ಅನ್ಯಾಯ, ಶೋಷಣೆ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ಮಾಡಿದ ಮಹಾನ್ ವ್ಯಕ್ತಿ ಡಾ. ಬಿ.ಆರ್. ಅಂಬೇಡ್ಕರ್ ಆಗಿದ್ದಾರೆ.

**ಮಾನವತಾವಾದಿಯಾಗಿ ಡಾ. ಬಿ.ಆರ್.ಅಂಬೇಡ್ಕರ್**

ಡಾ. ಬಿ.ಆರ್.ಅಂಬೇಡ್ಕರ್ ಅವರ ಬಾಲ್ಯದ ದಿನಗಳಲ್ಲಿ ಅವರ ಮನಸ್ಸನ್ನು ಪ್ರಭಾವಗೊಳಿಸಿದ್ದು ಕಬೀರದಾಸರ ತತ್ವಶಾಸ್ತ್ರ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ವ್ಯಕ್ತಿ ಮತ್ತು ವ್ಯಕ್ತಿಗಳ ನಡುವಿನ ಸರಿಯಾದ ಸಂಬಂಧಗಳನ್ನು ಆಧರಿಸಿದ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳೆಂಬ ಮೂರು ಪರಿಕಲ್ಪನೆಗಳನ್ನ ನೀಡಿದರು. ಏಕೆಂದರೆ ಧರ್ಮದ

ಬಗ್ಗೆ ಅದರಲ್ಲಿಯೇ ವಿಶೇಷವಾಗಿ ಹಿಂದೂ ಧರ್ಮದಲ್ಲಿರುವ ಶೋಷಣೆ ಮತ್ತು ಅನ್ಯಾಯದ ಮೂಲಗಳನ್ನ ಬೇರು ಸಮೇತ ಕಿತ್ತುಹಾಕುವಲ್ಲಿ ಈ ತತ್ವಗಳು ಮಹತ್ವವಾಗಿವೆ.

ಡಾ. ಬಿ.ಆರ್.ಅಂಬೇಡ್ಕರ್ ಅವರು ಎಮ್.ಎ., ಪಿಎಚ್.ಡಿ., ಡಿ.ಎಸ್ಸಿ. ಪದವಿ, ಎಲ್. ಎಲ್.ಬಿ. ಮುಂತಾದ ಪದವಿಗಳನ್ನು ಅಮೆರಿಕಾ, ಇಂಗ್ಲೆಂಡ್ ಹಲವು ದೇಶಗಳಲ್ಲಿ ಪಡೆದುಕೊಂಡಿದ್ದರು. ಅರವತ್ತೊಂದು ದೇಶಗಳನ್ನು ತಿರುಗಾಡಿ ಭಾರತ ದೇಶಕ್ಕೆ ಕಾನೂನು ಎಂಬ ಒಂದು ದೊಡ್ಡ ಸಂವಿಧಾನವನ್ನ ಬರೆದರು. ಅಂದರೆ ಅವಕಾಶ ಸಿಕ್ಕರೆ ಅಸ್ಪೃಶ್ಯನೊಬ್ಬ ಎಷ್ಟು ಎತ್ತರಕ್ಕೆ ಬೆಳೆಯಬಹುದು ಎಂಬುದಕ್ಕೆ ಡಾ. ಬಿ.ಆರ್.ಅಂಬೇಡ್ಕರ್ ಸಾಕ್ಷಿಯಾಗಿದ್ದಾರೆ.

ಎಲ್ಲಾ ದಲಿತರು ಸತ್ಯವನ್ನು ಅರಿತುಕೊಂಡು ಒಗ್ಗಟ್ಟಿನಿಂದ, ಸಂಘ ಶಕ್ತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಅವರ ತತ್ವಗಳ ಹಿನ್ನೆಲೆಯಲ್ಲಿ ನ್ಯಾಯಪರವಾಗಿ ಹೋರಾಟವನ್ನ ಮಾಡಿದರೆ ಮಾತ್ರ ದಲಿತರ ಬದುಕು ಸಾರ್ಥಕವಾಗುತ್ತದೆ. ಮಹಾ ಮಾನವತಾವಾದಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಕಂಡ ಕನಸುಗಳು ನೆರವೇರುತ್ತವೆ. ದಮನಿತ ಜನಾಂಗಕ್ಕೆ ಘನತೆ, ಗೌರವ ತಂದುಕೊಡುವಲ್ಲಿ ತಮ್ಮ ಜೀವನದುದ್ದಕ್ಕೂ ಹೋರಾಟ ಮಾಡಿದರು. ಬದುಕಿನ ಎಲ್ಲಾ ರಂಗಗಳಲ್ಲಿಯೂ ಪ್ರಾಮಾಣಿಕತೆ, ನಿಷ್ಠೆ, ನ್ಯಾಯಕ್ಕಾಗಿ ನೇರವಾಗಿ ಹೋರಾಡುವ ಛಲ ಮುಂತಾದ ಗುಣಗಳು ಡಾ. ಬಿ.ಆರ್.ಅಂಬೇಡ್ಕರ್ ಅವರಲ್ಲಿದ್ದವು.

ಡಾ. ಬಿ.ಆರ್.ಅಂಬೇಡ್ಕರ್ ಅವರ ಜೀವನ ಹೋರಾಟದ ಮೊದಲನೆಯ ಮಜಲು ದಲಿತ ವಿಮೋಚನೆಗಾಗಿ ಸೆಣಸಾಟವಾಗಿತ್ತು. ಉಳಿದ ಸಮಾಜ ಸುಧಾರಕರಂತೆ ಅವರು ತಮ್ಮ ಜೀವನದಲ್ಲಿ ಉಂಡು ಅನುಭವಿಸಿದ ಕಷ್ಟ, ನೋವು, ಅನ್ಯಾಯ, ಅಪಮಾನಗಳಿಗೆ ಲೆಕ್ಕವಿಲ್ಲ. ದಲಿತರ ಯುಗ ಯುಗದ ನೋವು, ಅನ್ಯಾಯ, ಅಪಮಾನಗಳು ಅವರನ್ನ ಚುಚ್ಚಿ ಚುಚ್ಚಿ ಹೆಚ್ಚಿಸಿದವು. ನಂತರ ಒಂದು ದಿನ ದಲಿತ ಸೂರ್ಯನ ಉದಯವಾಯಿತು. ಆ ಸೂರ್ಯ ಅಸ್ತಂಗತನಾಗುವವರೆಗೂ ದಣಿವಿಲ್ಲದೆ ಬೆಳಕು ಬೀರಿದ ಹಾಗೂ ಬಿತ್ತಿದ.

ಡಾ. ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಶೋಷಣೆಯ ಅನುಭವಗಳನ್ನು ಹೇಳುತ್ತಾ, ಕುಡಿಯಲು ನೀರು ಕೊಡದೆ, ಕನಿಷ್ಠ ದೇವರನ್ನು ನೋಡಲು ಬಿಡದೆ, 'ಧರ್ಮ ಧರ್ಮವೇ ಅಲ್ಲ, ಅದು ಪಾಪದ ಕೊಳಚೆಯ ರಾಶಿ. ಅದನ್ನು ಧರ್ಮವೆಂದು ಕರೆಯಬಾರದು' ಎಂದರು. ಇವರ ಮಾನವತಾವಾದವು ಪರ್ಯಾಯ ಪದವಾದ "ಸಾಮಾಜಿಕ ನ್ಯಾಯ"ವನ್ನು ಒಳಗೊಂಡಿದೆ. ಏಕೆಂದರೆ ಧರ್ಮ ಮತ್ತು ನೈತಿಕತೆ ಮಹತ್ವದೊಂದಿಗೆ ಇದು ನಿರಂತರ ಸಂಪರ್ಕ ಹೊಂದಿದೆ. ಡಾ. ಬಿ.ಆರ್.ಅಂಬೇಡ್ಕರ್ ಅವರು ಧರ್ಮ ವಿರೋಧಿಯಲ್ಲ, ಧಾರ್ಮಿಕ ಮನಸ್ಸುಳ್ಳವರಾಗಿದ್ದಾರೆ. ಆದರೆ ಧರ್ಮವು ವ್ಯಕ್ತಿಗೆ ತರ್ಕಬದ್ಧ ಅಭ್ಯಾಸದ ಸಂಸ್ಕೃತಿಯನ್ನ ನೀಡಬೇಕು.

ಭಾರತ ಸಂವಿಧಾನ ರಚನೆಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ರವರ ಪಾತ್ರ ಪ್ರಮುಖವಾಗಿದೆ, ಆದ್ದರಿಂದಲೇ ಅವರನ್ನ ಭಾರತ ಸಂವಿಧಾನದ ಶಿಲ್ಪಿ ಎಂದು ಕರೆಯುತ್ತಾರೆ. ಸುಮಾರು 61 ದೇಶಗಳನ್ನು ಸುತ್ತಾಡಿ, 2 ವರ್ಷ 11 ತಿಂಗಳು 18 ದಿನಗಳಲ್ಲಿ ಒಂದು ದೇಶದ ಸಂವಿಧಾನವನ್ನ ರಚನೆ ಮಾಡಲಿಕ್ಕೆ ಅಂಬೇಡ್ಕರ್ ಅವರು ತೆಗೆದುಕೊಂಡ ಸಮಯ. ಭಾರತ ದೇಶದ ಪ್ರಜೆಗಳಿಗೆ ಒಂದು ಬೃಹತ್ ಸಂವಿಧಾನವನ್ನ ರಚಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿನ ಶೋಷಣೆಯನ್ನ ಅನುಭವಿಸಿ, 'ನಾನು ಹಿಂದೂ ಆಗಿ ಹುಟ್ಟಿದ್ದೇನೆ, ಆದರೆ ಹಿಂದೂ ಆಗಿ ಸಾಯಲಾರೆ' ಎಂದು ತೀರ್ಮಾನಿಸಿ 1956 ರಲ್ಲಿ ಅಕ್ಟೋಬರ್ 14 ರಂದು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ

ಬೌದ್ಧ ಧರ್ಮವನ್ನು ಸ್ವೀಕರಿಸಿದರು.

**ಪರಾಮರ್ಶನ ಗ್ರಂಥಗಳು**


1. ಡಾ. ಎಚ್.ಟಿ. ಪೋತೆ – ಅಂಬೇಡ್ಕರ್ ಸಂವೇದನೆ, ಕುಟುಂಬ ಪ್ರಕಾಶನ ಕಲಬುರ್ಗಿ.
2. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು– ಸಂಪುಟ 18.
3. ಉರಿಕಂಡಾಯ/ ಡಾ. ಸಿದ್ದಲಿಂಗಯ್ಯ.
4. ಬಾಬಾ ಸಾಹೇಬ್ ಅಂಬೇಡ್ಕರವರ ಆತ್ಮಕತೆ– ಲೇಖಕರು ಎನ್. ಆರ್. ಶಿವರಾಂ. ಜೈ ಭೀಮ ಪ್ರಕಾಶನ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.